

ವಸಂತ ಮಂಟಪ



ಮುಸಾಪಿರ್ ಖಾನಾ

ಉತ್ಸವಮೂರ್ತಿಯನ್ನು ಸಾಲಂಕೃತ ತೆಪ್ಪದಲ್ಲಿ ಕೂರಿಸಿ, ಪುಷ್ಕರಣಿಯ ಸುತ್ತ ಸುತ್ತಲಾಗುತ್ತದೆ. ಈ ಆಚರಣೆಯನ್ನು ವೀಕ್ಷಿಸಲು ಹತ್ತಿರದ ಗ್ರಾಮಗಳ ಜನರು ಕೆರೆಯ ಸುತ್ತ ಜಮಾಯಿಸಿ ಆನಂದಿಸುತ್ತಾರೆ.

ಮುಸಾಪಿರ್ ಖಾನಾ: 1639 ರಲ್ಲಿ ಬಿಜಾಪುರ್ ದೊರೆ 'ರಣದುಲ್ಲಾ ಖಾನ್' ಸಂತೆಬೆನ್ನೂರನ್ನು ತನ್ನ ವಶಕ್ಕೆ ಪಡೆದುಕೊಳ್ಳುತ್ತಾನಲ್ಲದೆ, ಈ ಪುಷ್ಕರಣಿಯ ಪಕ್ಕದಲ್ಲಿ 150 ಅಡಿ ಉದ್ದ, 40 ಅಡಿ ಅಗಲದ ಕಟ್ಟಡವೊಂದನ್ನು ನಿರ್ಮಿಸುತ್ತಾನೆ. ಅದೇ ಮುಸಾಪಿರ್ ಖಾನಾ. ಗ್ರಾನೈಟ್ ಶಿಲೆಯಲ್ಲಿ ನಿರ್ಮಾಣಗೊಂಡ ವಿಶಾಲ ಕಟ್ಟಡ. ಇದರಲ್ಲಿ ಅನೇಕ ಹಿಂದೂ ಶೈಲಿಯ ಶಿಲ್ಪಗಳಿವೆ. ಎತ್ತರದ ಕಂಬಗಳನ್ನು ಹೊಂದಿದ ವಿಸ್ತಾರವಾದ ಒಳಾಂಗಣ, ಕುಸುರಿ ಕೆತ್ತನೆಯ ಮಿನಾರ್‌ಗಳು, ಮುಖ್ಯದ್ವಾರದ ರಚನೆ ಎಲ್ಲವೂ ಇಂಡೋ–ಅರೇಬಿಕ್ ವಾಸ್ತು ಶೈಲಿಯನ್ನು ನೆನಪಿಸುತ್ತವೆ. ರಣದುಲ್ಲಾ ಖಾನ್ ಪ್ರಾರ್ಥನೆಗಾಗಿ ಕಟ್ಟಿಸಿದ ಮಸೀದಿ ಇದು ಎಂದೂ ಹಲವು ಇತಿಹಾಸಕಾರರು ಅಭಿಪ್ರಾಯ ಪಡುತ್ತಾರೆ. ಪುಷ್ಕರಣಿ, ರಾಮ ದೇವಾಲಯ, ಮತ್ತು ಮಸೀದಿ ಎಲ್ಲವೂ ಒಂದೆಡೆ ಸೇರಿ ಕೋಮು ಸಾಮರಸ್ಯದ ಪ್ರತೀಕವಾಗಿಯೂ ಈ ಕಟ್ಟಡ ಪ್ರಸಿದ್ಧವಾಗಿದೆ.